ಎಂಬುದು ಹುಂಬತನವೆನ್ನುತ್ತ ಹೈರಾಣಿಗೆ ರೈಲಿನಿಂದ ಇಳಿದು ಹೆಜ್ಜೆ ಹಾಕಿದೆ.

ನಾಲ್ಕು ಹೆಜ್ಜೆಯೂ ಇಟ್ಟಿರಲಿಲ್ಲ. ಕೂದಲಿಗೆ ಬಣ್ಣಾ ಹಾಕೀದಿ. ಥೋಡೆ ಮೈ ಬಿಟ್ಟೀದಿ, ಉಳಿದ್ದೆಲ್ಲಾ ಹಂಗೇ ಇದ್ದೀ, ಎನ್ನುವ ಧ್ವನಿ ಬಂದತ್ತ ನೋಡಿದೆ. ಸಪೂರ ದೇಹ, ಬರಿಗೊರಳು, ಬಳೆಗಳಿಲ್ಲದ ಕೈ, ನೆರೆತ ಕೂದಲು, ಹತ್ತಿ ಬಟ್ಟೆಯ ಪತ್ತಲ, ಕಾಲಲ್ಲಿ ಹವಾಯಿ ಚಪ್ಪಲಿ ಹಾಕಿ ಮುಗುಳ್ನಗೆಯಲ್ಲಿ ಆಕೆ ಕಂಬಕ್ಕೆ ಮರೆಯಾಗಿ ನಿಂತಿದ್ದಳು. ಕೃತಕತೆಯಿಲ್ಲದ ನಿಲುವು, ತುಟಿಯಲ್ಲಿ ಮಾಸದ ಮುಗುಳ್ನಗು, ಹೊಳೆವ ಮುಖದ ಸೊಬಗು, ಕಳೆದುಹೋದ ವರ್ಷಗಳ ಅಂತರವನ್ನು ಅಳಿಸಿ ಹಾಕಿದವು. ಗಾಡಿ ಇಷ್ಟ್ ತಡಾ ಮಾಡಿಬಂದ್ರ ಯಾರು ಕಾಯ್ಕೋತ ನಿಂದ್ರತಾರೋಪ. ನಾನೇ ಎಲ್ಲಾರನ್ನೂ ಕಳಿಸೀನಿ. ಆರಾಮಿದ್ದಿಯಿಲ್ಲೊ. ಹೆಣ್ತಿಮಕ್ಕಳ ವಿಚಾರ ಆಮ್ಯಾಲ ಹೇಳಕಂತಿ, ಆ ಬ್ಯಾಗ್‌ಕೊಡು ಎಂದು ಕೈಯಲ್ಲಿದ್ದ ಲಗೇಜನ್ನು ಎಳೆದು ಇಸಿದುಕೊಂಡಳು. ನನ್ನ ತಬ್ಬಿಬ್ಬು ಕಂಡು, ಹಂಗ್ಯಾಕ ಘಾಬರಿ ಆಗೇದಿ, ನಾನೇ, ಮುದುಕಿ ಆಗೇನಿ, ಅಷ್ಟೇ, ಎಂದು ಬೆನ್ನಿಗೆ ಮೆತ್ತಗೆ ಬಾರಿಸಿದಳು.

ತನ್ನನ್ನು ಹಿಂಬಾಲಿಸುತ್ತಾನೆ ಎಂಬ ವಿಶ್ವಾಸದಲ್ಲಿ, ಸೀತನಿ ಹೊಲದಾಗಿಂದ ಊರಿಗೆ ಹೋಗೂಣು. ಆ ವಾಸನಿ ನಿನಗ ಭಾಳ ಸೇರತದಂತ ನನಗ ಗೊತ್... ಎಂದು ನಾನು ಕೇಳುತ್ತಿದ್ದೇನೊ ಇಲ್ಲವೊ ಲೆಕ್ಕಿಸದೆ, ಲಗ್ನಾ ಯಾಕ ಆಗಿಲ್ಯಂದ. ನಮ್ಮೂರ ಸಾಲಿ, ಮಕ್ಕಳೇ ನನಗ ಎಲ್ಲಾ ಆಗ್ಯಾವ ನೋಡು. ಇಲ್ಲೆ ಟೀಚರ್ ಆಗೀನಿ. ಶಿಕೋಣಿನೂ ತಗೋತೀನಿ. ನಿನ್ನ ಪತ್ತಾ ಹುಡುಕಿ ಪತ್ರಾ ಬರಿಸಿದ್ದು ನಾನೇ. ಬಂದಿ ಭಾಳ ಛಲೋ ಆತು. ಖರೇ ಅಂದ್ರ, ನಿನ್ನ ನೋಡಬೇಕಂತನೇ ಈ ಖಟಿಪಿಟಿ ಮಾಡಿದ್ನೇನೊ ಅನಸ್ತದ. ಒಮ್ಮೆ ನೋಡಬೇಕ ಅನಿಸಿತ್ತು, ಅಷ್ಟ... ಈಗ ಹೇಳು ನಿಂದೇನ ಕಥಿ ಅಂತ, ಎಂದು ಆಕೆ ಹಿಂದೆ ತಿರುಗಿದಾಗ ಚಳಿ, ಮುಳುಗುವ ಇಳಿಸಂಜೆಯ ಸೂರ್ಯನ ಬೆಳಕು ಆಕೆಯ ಮುಖದ ಮೇಲೆ ಬಿದ್ದು, ಮೂವತ್ತು ವರ್ಷದಿಂದ ಮಾಸದಂತೆ ಜತನವಾಗಿಟ್ಟುಕೊಂಡ ಆಕೆಯ ಮುಗ್ಧ ನಗು, ಕಾಪಿಟ್ಟ ಕಾತರಗಳಿಂದ ತುಂಬಿದ ಮುಖ, ಕೆಂಪಿನಿಂದ ಹೊಳೆಯತೊಡಗಿತು.

ಒಳಗೆ ಹೆಪ್ಪುಗಟ್ಟುತ್ತಿದ್ದ ಅಸ್ವಸ್ಥತೆ ತಡೆಯುವುದಾಗದೆ ಜೋಳದ ದಂಟನ್ನು ಹಿಡಿದು ಕುಸಿದು ಕುಳಿತು ಅಳತೊಡಗಿದೆ.

## ಕೇಶವ ಮಳಗಿ

ಕನ್ನಡದ ಪ್ರಮುಖ ಕಥೆಗಾರ ಕೇಶವ ಮಳಗಿ ಬಳ್ಳಾರಿ ಜಿಲ್ಲೆಯವರು. ಜನಸಾಮಾನ್ಯರ ಬದುಕನ್ನು, ಘನತೆ, ಪ್ರೀತಿಯಿಂದ ಜೀವಿಸುವ ರೀತಿಯನ್ನು ಅವರ ಕತೆಗಳು ದಟ್ಟವಾಗಿ ಚಿತ್ರಿಸುತ್ತವೆ. ಕಡಲ ತೆರೆಗೆ ದಂಡೆ', 'ಮಾಗಿ ಮೂವತ್ತೈದು', 'ವೆನ್ನೆಲ ದೊರಸಾನಿ', 'ಹೊಳೆ ಬದಿಯ ಬೆಳಗು' ಅವರ ಕಥಾಸಂಕಲನಗಳಾದರೆ, 'ಕುಂಕುಮ ಭೂಮಿ', 'ಅಂಗಧ ಧರೆ' ಅವರ ಕಾದಂಬರಿಗಳು. 'ನೇರಳೆ ಮರ' ರೂಪಕ ಲೋಕದ ಕಥನಗಳನ್ನು ನಿರೂಪಿಸುವ ಕೃತಿ. 'ಬೋರಿಸ್ ಪಾಸ್ತರ್‌ನಾಕ್: ವಾಚಿಕೆ', 'ನೀಲಿ ಕಡಲ ಹಕ್ಕಿ' (ಕತೆಗಳು), 'ಮದನೋತ್ಸವ' (ಕಾದಂಬರಿ), 'ಸಂಕಥನ' (ಫ್ರೆಂಚ್ ಸಾಹಿತ್ಯ, ಸಮಾಜ, ಸಂಸ್ಕೃತಿ, ಸಾಹಿತ್ಯ ವಿಮರ್ಶೆ), 'ಕಡಲಾಚೆಯ ಚೆಲುವೆ' (ಫ್ರೆಂಚ್ ಕಥೆಗಳು) ಸೇರಿದಂತೆ ಹಲವು ಅನುವಾದಿತ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿರುವ ಮಳಗಿ, ಸೃಷ್ಟಿ ಇನ್‌ಸ್ಟಿಟ್ಯೂಟ್ ಆಫ್ ಆರ್ಟ್, ಡಿಸೈನ್ ಆ್ಯಂಡ್ ಟೆಕ್ನಾಲಜಿಯಲ್ಲಿ ಬೋಧಕರಾಗಿದ್ದಾರೆ.